## ಚಿಕ್ಕಣ್ಣ ಚಮಕ್

ಹೆಸರಷ್ಟೇ ಚಿಕ್ಕಣ್ಣ, ಕಾಮಿಡಿಯಲ್ಲಿ ಇವರು ದೊಡ್ಡಣ್ಣ! ಏಳು ವರ್ಷಗಳಲ್ಲಿ ಸೆಂಚುರಿಯ ಗಡಿಯಲ್ಲಿ ನಿಂತಿರುವ ಸಾಧನೆ. ಅಮಾಯಕ ನಗೆಯ, ಅಸಾಧ್ಯ ಟೈಮಿಂಗ್‌ನ ಚಿಕ್ಕಣ್ಣ ಮಗುತನ ಉಳಿಸಿಕೊಂಡಿರುವ ಕಲಾವಿದ.

★ ಮಾತುಕತೆ: ರಘುನಾಥ ಚ.ಹ.
ಚಿತ್ರ: ಆನಂದ ಬಕ್ಷಿ

# ಟೆನ್ತ್ ಕ್ಲಾಸ್ ಅಕ್ಕೋರು!

"ಎಸ್‌ಎಸ್‌ಎಲ್ಸಿನಲ್ಲಿ ನನ್ನ ಕ್ಲಾಸ್ಮೇಟ್ಸ್ ಹುಡುಗೀರನ್ನೆಲ್ಲಾ ಅಕ್ಕಾ ಅಂತಲೇ ಕರೀತಿದ್ದೆ. ಹುಡುಗೀರೆಲ್ಲ ಬಯ್ಯೋವು. ಆದರೆ ಮನೆಯಲ್ಲಿ ನನ್ನನ್ನ ಹಾಗೆ ಬೆಳೆಸಿಬಿಟ್ಟಿದ್ದರು. ಕಾಲೇಜಿಗೆ ಚಪ್ಪಲಿ ಹಾಕಿಕೊಂಡು ಹೋಗ್ತಿರಲಿಲ್ಲ. ಚಪ್ಪಲಿ ಹಾಕಿಕೊಂಡು ಹೋಗಬೇಕು ಅನ್ನೋ ಸೆನ್ಸೂ ಇರಲಿಲ್ಲ. ಬೆಂಗಳೂರಿಗೆ ಬಂದ ಮೇಲೇನೆ ಬುದ್ಧಿ ಸ್ವಲ್ಪ ಮೆಚ್ಯೂರ್ ಆಗಿದ್ದು. ಅಲ್ಲೀವರೆಗೆ ಏನೂ ಗೊತ್ತಿರಲಿಲ್ಲ. ಬೆಂಗಳೂರಿಗೆ ಬಂದು ಮೂರು ವರ್ಷ ಆದ ಮೇಲೆ ಬಟ್ಟೆ ಗಿಟ್ಟೆ ಅಂತ ಸ್ವಲ್ಪ ಬದಲಾಗಿದ್ದು. ಅಲ್ಲೀವರೆಗೂ ಊರಲ್ಲಿ ಹೊಲ ಉಳೋವ್ರಂಗೇ ಇದ್ದಿದ್ದು..."

–'ಆ್ಯಕ್ಟರ್ ಆಗದೆ ಇದ್ದಿದ್ದರೆ ಏನಾಗ್ತಿದ್ರಿ' ಎನ್ನುವ ಪ್ರಶ್ನೆಗೆ ಚಿಕ್ಕಣ್ಣ ನೆನಪಿಸಿಕೊಂಡಿದ್ದು ತಮ್ಮ ಹೈಸ್ಕೂಲ್ ದಿನಗಳನ್ನು. ಈವರೆಗಿನ ಬದುಕಿನಲ್ಲಿ ಯಾವುದನ್ನೂ ಪ್ಲಾನ್ ಮಾಡಿರಲಿಲ್ಲ; ಹಾಗೆ ಮಾಡುವ ಬುದ್ಧಿಯೂ ಇರಲಿಲ್ಲ ಎನ್ನುವುದನ್ನು ಹೇಳಲಿಕ್ಕೆ ಅವರು ನೆನಪಿಸಿಕೊಂಡಿದ್ದು ತಮ್ಮ 10ನೇ ತರಗತಿಯ ಅಕ್ಕಂದಿರನ್ನು!

'ಸುಧಾ ಹಾಸ್ಯ ವಿಶೇಷಾಂಕ'ಕ್ಕೆಂದು ಚಿಕ್ಕಣ್ಣನವರನ್ನು ಮಾತನಾಡಿಸಲು ಹೋಗಿ, ಅವರ ಮನೆಯ ಬೆಲ್ಲನ್ನು ಎಷ್ಟು ಸಾರಿ ಹೊತ್ತಿದರೂ ಬಾಗಿಲು ತೆರೆದುಕೊಳ್ಳಲಿಲ್ಲ. 'ಬಾಗಿಲು ತೆರೆ ಚಿಕ್ಕಣ್ಣ' ಎಂದು ಇನ್ನೇನು ಹಾಡಬೇಕು ಎನ್ನುವಷ್ಟರಲ್ಲಿ ಪಕ್ಕದ ಮನೆಯವರು ಹೇಳಿದ್ದು – 'ಅವರ ಮನೆಗೆ ಬೆಲ್ ಇಲ್ಲ. ತೆಗೆಸಿಬಿಟ್ಟಿದ್ದಾರೆ'.

ಸರಿ, ಬಾಗಿಲು ತಟ್ಟಿದ್ದಾಯಿತು. ಅದು ತೆರೆದುಕೊಂಡಿತು.

ಟೀವಿಯಲ್ಲಿನ ಯಾವುದೋ ಧಾರಾವಾಹಿಯನ್ನು ಮ್ಯೂಟ್ ಮಾಡಿಕೊಂಡು ನೋಡುತ್ತಲೇ ಚಿಕ್ಕಣ್ಣ ಮಾತಿಗೆ ಕುದುರಿಕೊಂಡರು. 'ಐವತ್ತು ಸಿನಿಮಾ ಆಗಿರಬೇಕಲ್ಲ' ಎನ್ನುವ ಪ್ರಶ್ನೆಗೆ – 'ಜಾಸ್ತೀನೆ ಆಯ್ತು ಸಾರ್.. ತೊಂಬತ್ತರ ಮೇಲಾದವು, ನೂರರ ಹತ್ತಿರ ಹತ್ತಿರ' ಎಂದರು.

'ಏಳು ವರ್ಷಗಳಲ್ಲಿ ಸೆಂಚುರಿ ಸ್ಟಾರ್ ಆಗಿಬಿಟ್ಟಿರಿ' ಎಂದರೆ, 'ಹೂಂ, ಸ್ವಲ್ಪ

